ನಸದೊ/ತಾಂತ್ರಿಕ ವಿಭಾಗ/ಟಿ.ಎಸ್.12/2009-10 ದಿನಾಂಕ:25-05-2010

## -:: ಅಲ್ಪಾವಧಿ ಟೆಂಡರ್ ಪ್ರಕಟಣೆ ::-

ದೊಡ್ಡಬಳ್ಳಾಪುರ ನಗರಸಭಾ ವ್ಯಾಪ್ತಿಯಲ್ಲಿ ಮುಖ್ಯಮಂತ್ರಿಯವರ ಸಣ್ಣ ಮತ್ತು ಮಧ್ಯಮ ಪಟ್ಟಣಗಳ ಅಭಿವೃದ್ಧಿ ಕಾರ್ಯಕ್ರಮ(ಸಿಎಂಎಸ್ಎಂಟಿಡಿಪಿ)ಯೋಜನೆಯಡಿ ಸರ್ಕಾರದಿಂದ ಬಿಡುಗಡೆಯಾಗಿರುವ ಅನುದಾನದಲ್ಲಿ ಈ ಕೆಳಕಂಡ ಕಾಮಗಾರಿಗಳನ್ನು ಕೈಗೊಳ್ಳಲು ಉದ್ದೇಶಿಸಿದ್ದು, KW1ನ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಡ್ ನಿಯಮಾವಳಿಗಳ ಮೇರೆಗೆ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ 3ನೇ ಮತ್ತು ಮೇಲ್ಪಟ್ಟ ಅರ್ಹ ದರ್ಜೆ ಗುತ್ತಿಗೆದಾರರಿಂದ ಐಟಂವಾರು ಟೆಂಡರನ್ನು ದ್ವಿಪ್ರತಿಯಲ್ಲಿ ಕರೆಯಲಾಗಿದೆ. ಟೆಂಡರ್‌ದಾರರು ಭರ್ತಿ ಮಾಡಿದ ಟೆಂಡರ್ ಲಕೋಟೆಗಳನ್ನು ಪೌರಾಯುಕ್ತರು, ನಗರಸಭೆ, ದೊಡ್ಡಬಳ್ಳಾಪುರ ಇವರ ಕಛೇರಿಯಲ್ಲಿ ದಿನಾಂಕ: 09-06-2010 ಸಾಯಂಕಾಲ 4.00ಗಂಟೆಯೊಳಗೆ ಸ್ವೀಕರಿಸಲಾಗುವುದು. ಹಾಗೂ ಸಾಧ್ಯವಾದಲ್ಲಿ ಇದೇ ದಿನಾಂಕದಂದು ಟೆಂಡರ್‌ನ್ನು ತೆರೆಯಲಾಗುವುದು. ಅಥವಾ ಟೆಂಡರ್ ತೆರೆಯುವ ದಿನಾಂಕವನ್ನು ತಿಳಿಸಲಾಗುವುದು.

1. ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 08-06-2010 ಮಧ್ಯಾಹ್ನ 2.00ಗಂಟೆವರೆಗೆ
2. ಖಾಲಿ ಟೆಂಡರ್ ಫಾರಂ ನೀಡುವ ದಿನಾಂಕ: 08-06-2010

ಕೆಳಗಿನ ಕಾಮಗಾರಿಗಳನ್ನು ನಿರ್ವಹಿಸಲು ನೀಡಿರುವ ಕಾಲಾವಧಿ: 90ದಿನಗಳು

| ಕ್ರ. ಸಂ | ಕಾಮಗಾರಿಯ ಹೆಸರು | ಟೆಂಡರ್ ಗಿಟ್ಟ ಮೊತ್ತ (ಲಕ್ಷಗಳಲ್ಲಿ) | ಇಎಂಡಿ ಮೊತ್ತ(ರೂ. ಗಳಲ್ಲಿ) | ಟೆಂಡರ್ ಫಾರಂ ಬೆಲೆ (ರೂ.ಗಳಲ್ಲಿ) |
|---|---|---|---|---|
| 1 | 2 | 3 | 4 | 5 |
| 1 | ರೋಜಿಪುರ ಕೊಳಚೆ ಪ್ರದೇಶಲ್ಲಿ ರಸ್ತೆ ಮತ್ತು ಚರಂಡಿ ಅಭಿವೃಧ್ಧಿ ಕಾಮಗಾರಿಗಳು. | 10.00 | 25000.00 | 1000.00 + ತೆರಿಗೆ |
| 2 | ನಗರಸಭಾ ವ್ಯಾಪ್ತಿಯ ರಂಗಪ್ಪ ಸರ್ಕಲ್ ಹತ್ತಿರದಲ್ಲಿನ ಶಿರಡಿಸಾಯಿಬಾಬ ದೇವಸ್ಥಾನದ ಪಕ್ಕದ ರಾಜಕಾಲುವೆಗೆ ಡೆಕ್ ಸ್ಲ್ಯಾಬ್ ಕಲ್ವರ್ಟ್ ನಿರ್ಮಾಣ ಕಾಮಗಾರಿ | 9.80 | 25000.00 | 1000.00 +ತೆರಿಗೆ |

**ಷರತ್ತುಗಳು:-**

1. ಖಾಲಿ ಟೆಂಡರ್ ಫಾರಂಗಾಗಿ ಮನವಿ ಸಲ್ಲಿಸುವಾಗ ಟೆಂಡರ್ ಫಾರಂ ಬೆಲೆ ಹಣವನ್ನು ರಾಷ್ಟ್ರೀಕೃತ ಬ್ಯಾಂಕಿನಲ್ಲಿ ಡಿ.ಡಿ ಮೂಲಕ ಪೌರಾಯುಕ್ತರು, ನಗರಸಭೆ, ದೊಡ್ಡಬಳ್ಳಾಪುರ ರವರ ಹೆಸರಿನಲ್ಲಿ ಅಥವಾ ಕಛೇರಿಯಲ್ಲಿ ನಗದು ಪಾವತಿಸಿದ ರಸೀದಿ ಸಲ್ಲಿಸತಕ್ಕದ್ದು.
2. ಇ.ಎಂ.ಡಿ ಹಣವನ್ನು ರಾಷ್ಟ್ರೀಕೃತ ಬ್ಯಾಂಕಿನಲ್ಲಿ ಡಿ.ಡಿ ಮೂಲಕ ಪೌರಾಯುಕ್ತರು, ನಗರಸಭೆ, ದೊಡ್ಡಬಳ್ಳಾಪುರ ರವರ ಹೆಸರಿನಲ್ಲಿ ಭರ್ತಿ ಮಾಡಿದ ಟೆಂಡರ್ ಲಕೋಟೆಗಳೊಂದಿಗೆ ಸಲ್ಲಿಸತಕ್ಕದ್ದು.
3. KW1 ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ ನಿಯಮಾವಳಿಗಳಂತೆ ಟೆಂಡರನ್ನು ಸಲ್ಲಿಸುವುದು.
4. ಕಾಮಗಾರಿಗಳು ಪೂರ್ಣಗೊಂಡ ನಂತರ 3ನೇ ಪಾರ್ಟಿಯಿಂದ ಕಾಮಗಾರಿ ಗುಣಮಟ್ಟದ ಬಗ್ಗೆ ದೃಢೀಕರಣ ಪತ್ರವನ್ನು ಸಲ್ಲಿಸಿದ ನಂತರ ಬಿಲ್ ಪಾವತಿಗೆ ಕ್ರಮ ಕೈಗೊಳ್ಳಲಾಗುವುದು,
5. ಎರಡು ವರ್ಷ ಕಾಮಗಾರಿಯ ನಿರ್ವಹಣೆಯನ್ನು ಗುತ್ತಿಗೆದಾರರೇ ನಿರ್ವಹಿಸುವುದು.
6. ಟೆಂಡರ್‌ಗಳನ್ನು ಅಂಗೀಕರಿಸುವ ಅಥವಾ ತಿರಸ್ಕರಿಸುವ ಅಧಿಕಾರವನ್ನು ಸಕ್ಷಮ ಪ್ರಾಧಿಕಾರ ಕಾಯ್ದಿರಿಸಿಕೊಂಡಿರುತ್ತದೆ,
7. ಟೆಂಡರ್ ನಿಬಂಧನೆಗಳು ಹಾಗೂ ಇತರೆ ಹೆಚ್ಚಿನ ಮಾಹಿತಿಗಳನ್ನು ಕಛೇರಿಯ ವೇಳೆಯಲ್ಲಿ ಮತ್ತು www.doddaballapurcity.gov.in ನಲ್ಲಿ ಪಡೆದು ತಿಳಿದುಕೊಳ್ಳುವುದು.

-ಸಹಿ-

**(ಎಸ್.ಪ್ರಭುದೇವ್ ಕೆ.ಎಂ.ಎ.ಎಸ್.)**

ಪೌರಾಯುಕ್ತರು,

ನಗರಸಭೆ, ದೊಡ್ಡಬಳ್ಳಾಪುರ

ನಸದೊ/ತಾಂತ್ರಿಕ ವಿಭಾಗ/ಟಿ.ಎನ್.12/2009–10 25–05–2010

**ರವರಿಗೆ:**

**ವರದಿಗಾರರು,**

__________ ದಿನಪತ್ರಿಕೆ,

**ದೊಡ್ಡಬಳ್ಳಾಪುರ.**

ಮಾನ್ಯರೇ,

ವಿಷಯ:–ಅಲ್ಪಾವಧಿ ಟೆಂಡರ್ ಪ್ರಕಟಣೆಯನ್ನು ತಮ್ಮ ದಿನ ಪತ್ರಿಕೆಯಲ್ಲಿ ಪ್ರಚುರ ಪಡಿಸುವ ಬಗ್ಗೆ.

ಉಲ್ಲೇಖ:–ಈ ಕಛೇರಿ ಅಲ್ಪಾವಧಿ ಮರುಟೆಂಡರ್ ಪ್ರಕಟಣೆ ಸಂಖ್ಯೆ.ನಸದೊ/ತಾಂತ್ರಿಕ ವಿಭಾಗ/ಟಿ.ಎನ್.12/2009–10 ದಿನಾಂಕ:25–05–2010ರಂತೆ.

* * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಈ ಪತ್ರಕ್ಕೆ ಲಗತ್ತಿರುವ ನಗರಸಭೆಯ ಸಿಎಂಎಸ್ಎಂಟಿಡಿಪಿ ಯೋಜನೆಯಡಿಯಲ್ಲಿನ ಅಭಿವೃದ್ದಿ ಕಾಮಗಾರಿಗಳಿಗೆ ಕರೆದಿರುವ ಅಲ್ಪಾವಧಿ ಟೆಂಡರ್ ಜಾಹಿರಾತನ್ನು ಅತೀ ಕಡಿಮೆ ಅಂಕಣದಲ್ಲಿ ತಮ್ಮ ದಿನ ಪತ್ರಿಕೆಯಲ್ಲಿ ಪ್ರಕಟಿಸಲು ಕೋರಿದೆ. ಈ ಪ್ರಕಟಣೆಯ ವೆಚ್ಚದ ಬಿಲ್ ಜೊತೆಯಲ್ಲಿ ಪತ್ರಿಕೆಯ ಹತ್ತು ಪ್ರತಿಗಳನ್ನು ಈ ಕಛೇರಿಗೆ ಕಳುಹಿಸಿಲು ಕೋರಿದೆ.

**ತಮ್ಮ ವಿಶ್ವಾಸಿ,**

**ಪೌರಾಯುಕ್ತರು,**

**ನಗರಸಭೆ, ದೊಡ್ಡಬಳ್ಳಾಪುರ.**

ನಸದೊ/ತಾಂತ್ರಿಕ ವಿಭಾಗ/ಟಿ.ಎನ್.12/2009-10 25-05-2010

**ರವರಿಗೆ:**

**ಮಾನ್ಯ ಜಿಲ್ಲಾಧಿಕಾರಿಗಳು,**
ಬೆಂಗಳೂರು ಗ್ರಾಮಾಂತರ ಜಿಲ್ಲೆ,
**ಬೆಂಗಳೂರು.**

ಮಾನ್ಯರೇ,

ವಿಷಯ:-ಅಲ್ಪಾವಧಿ ಟೆಂಡರ್ ಪ್ರಕಟಣೆಯನ್ನು ಜಿಲ್ಲಾ ಟೆಂಡರ್ ಬ್ಯುಲೆಟಿನ್‌ನಲ್ಲಿ ಪ್ರಚುರ ಪಡಿಸುವ ಬಗ್ಗೆ.

ಉಲ್ಲೇಖ:-ಈ ಕಛೇರಿ ಅಲ್ಪಾವಧಿ ಮರುಟೆಂಡರ್ ಪ್ರಕಟಣೆ ಸಂಖ್ಯೆ.ನಸದೊ/ತಾಂತ್ರಿಕವಿಭಾಗ/ಟಿ.ಎನ್.12/2009-10 ದಿನಾಂಕ:25-05-2010ರಂತೆ.

* * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖದ ರೀತ್ಯಾ ಪತ್ರಕ್ಕೆ ಲಗತ್ತಿರುವ ನಗರಸಭೆಯ ಸಿಎಂಎಸ್ಎಂಟಿಡಿಪಿ ಯೊಜನೆಯಡಿಯಲ್ಲಿನ ಕಾಮಗಾರಿಗಳ ಅಲ್ಪಾವಧಿ ಟೆಂಡರ್ ಪ್ರಕಟಣೆಯನ್ನು ತಮ್ಮ ಕಛೇರಿಯ ಜಿಲ್ಲಾ ಟೆಂಡರ್ ಬ್ಯುಲೆಟಿನ್‌ನಲ್ಲಿ ಪ್ರಕಟಿಸಲು ಕೋರಿದೆ.

**ತಮ್ಮ ವಿಶ್ವಾಸಿ,**

**ಪೌರಾಯುಕ್ತರು,**
**ನಗರಸಭೆ, ದೊಡ್ಡಬಳ್ಳಾಪುರ.**